ಮಾಮಿಯದು, ಇನ್ನೊಂದು ಅಜ್ಜಿಯದು. ನಾನು ಮತ್ತು ಅಮ್ಮ ಅಲ್ಲಿ ಉಳಿದಾಗ ಅಜ್ಜಿಯ ರೂಮಿನಲ್ಲೇ ಸೆಖೆಯೆಂದು ಗೊದಡಿ ಹಾಸಿಕೊಂಡು ಮಲಗುತ್ತಿದ್ದೆವು.

ಅಲ್ಲೇ ಪಕ್ಕದಲ್ಲಿ ಅಡುಗೆಮನೆ, ದೇವರ ಕೋಣೆ, ಸಣ್ಣ ಬಚ್ಚಲು. ಪಾಯಿಖಾನೆಯನ್ನು ಬಾಗಾಯತದ ಅಂಚಿಗೆ ಒಂದು ಮೂಲೆಯಲ್ಲಿ ಕಟ್ಟಿಸಲಾಗಿತ್ತು. ಇಡೀ ಮನೆಯ ನೆಲಕ್ಕೆ ಕೆಂಪು ಬಣ್ಣದ ರೆಡ್ ಆಕ್ಸೈಡಿನ ತಂಪಿತ್ತು. ಮನೆಯ ಸುತ್ತ ಮಾವು, ಹಲಸು, ತೆಂಗಿನ ಮರಗಳು. ತುಸು ದೂರದಲ್ಲಿ ತಟ್ಟಿ ಕಟ್ಟಿ ನಿರ್ಮಿಸಿದ್ದ ಹಂಡೆ ಸ್ನಾನದ ಬಚ್ಚಲು. ಮನೆಗೆ ಸಂಬಂಧವೇ ಇರದ ಹಾಗೆ ಹಜಾರದ ಎಡಕ್ಕೆ

